# ಸರ್ಕಾರಿ ಕೆಲಸ ದೇವರ ಕೆಲಸ!

**ಸರ್ಕಾರದ ಕೆಲಸವನ್ನು ಶ್ರದ್ಧೆಯಿಂದ ಶ್ರಮವಹಿಸಿ ಮಾಡಿದರೂ ಆಗುತ್ತದೆ ಅಥವಾ ಕಚೇರಿಗೆ ಹಾಜರಾಗಿ ಹಾಜರಾತಿಗೆ ಸಹಿ ಮಾಡಿ ಸುಮ್ಮನಿದ್ದರೂ ತೀರುತ್ತದೆ ಎಂಬ ಅಭಿಪ್ರಾಯ ಒಡಮೂಡಿದೆಯೇ?**

ಶ್ರಮ ಶಕ್ತಿಯ ವ್ಯಯದ ಮೇಲೆ ಜಗತ್ತಿನ ಸಂಸ್ಕೃತಿ– ನಾಗರಿಕತೆಗಳು ಅರಳಿವೆ. ಜೀವಿಯು ದೈನಂದಿನ ಕ್ರಿಯಾತ್ಮಕ ಚಟುವಟಿಕೆಗಳನ್ನು ತನ್ನ ಶ್ರಮ ಶಕ್ತಿಯನ್ನು ಬಳಸಿಯೇ ಮಾಡಬೇಕಾಗುತ್ತದೆ. ಆ ಮೂಲಕ ತನ್ನ ಆಹಾರ, ವಿನೋದ ಮುಂತಾದ ಆಸಕ್ತಿಗಳನ್ನು ತೃಪ್ತಿಪಡಿಸಲು ಯತ್ನಿಸುತ್ತದೆ. ಅಷ್ಟೇ ಅಲ್ಲ, ತನ್ನ ಸಂತತಿ ಮುಂದುವರಿಸಲು ಮಾಡುವ ಲೈಂಗಿಕ ಕ್ರಿಯೆಯ ಸಾಫಲ್ಯವನ್ನು ಕೂಡ ಇದರ ಮೇಲೆಯೇ ಕಾಣಬೇಕಾಗುತ್ತದೆ. ಅಂದಮೇಲೆ ಕೆಲಸವೆಂಬುದು ಜೀವಿಯ ಆದ್ಯ ಕ್ರಿಯೆ. ಅದಿಲ್ಲದೆ ಅದು ಬದುಕಲಾರದು, ಬೆಳೆಯಲಾರದು. ತನ್ನ ಕ್ರಿಯಾಶೀಲತೆಯ ಮೂಲಕವೇ ಜೀವಿಯ ವಿಕಾಸ ನಿಂತಿದೆ.

ವ್ಯಕ್ತಿಯಲ್ಲಿ ಈ ಶ್ರಮಸಂಸ್ಕೃತಿ ಎರಡು ನೆಲೆಗಳಲ್ಲಿ ಕ್ರಿಯಾಶೀಲವಾಗಿರುತ್ತದೆ. ಒಂದು ಬೌದ್ಧಿಕ ನೆಲೆಯದು, ಮತ್ತೊಂದು ದೈಹಿಕ ನೆಲೆಯದು. ಇವುಗಳೆರಡರಲ್ಲಿ ಒಂದು ಹೆಚ್ಚಲ್ಲ, ಮತ್ತೊಂದು ಕಡಿಮೆಯಲ್ಲ. ಹಾಗೆಂದು ತಿಳಿಯಬಾರದು; ತಿಳಿದಲ್ಲಿ ಅದು ಅಜ್ಞಾನವಾಗುತ್ತದೆ. ಕ್ರೌರ್ಯವೆನಿಸುತ್ತದೆ. ಇವೆರಡೂ ಸಮಾನವಾಗಿ, ಸಮಾನ ಗೌರವದಿಂದ ಕ್ರಿಯಾಶೀಲವಾದಾಗ ಮಾತ್ರ ಸುಖೀಸಮಾಜದ ನಿರ್ಮಾಣ. ಆದರೆ ಬೌದ್ಧಿಕ ಜಗತ್ತು ತನ್ನನ್ನು ತಾನು ಮೇಲೆಂದು ಬಗೆದು ದೈಹಿಕ ಶ್ರಮವನ್ನು ಚರಿತ್ರೆಯುದ್ದಕ್ಕೂ ಕೀಳೆಂದು ಭಾವಿಸಿ, ಅದರ ದುಡಿಮೆಯ ಮೇಲೆ ಕೂತುಣ್ಣುವ ಕೆಲಸ ಮಾಡಿದೆ; ಬಹುಸಂಖ್ಯಾತ ದೈಹಿಕ ಶ್ರಮಿಕರನ್ನು ನೋವಿನ ಕೂಪದಲ್ಲಿ ನೂಕಿ ಅಮಾನವೀಯ ಕ್ರೌರ್ಯವನ್ನು ಆಚರಿಸಿದೆ. ಇದನ್ನು ಮನಗಂಡ ನಮ್ಮ ವಚನಕಾರರು 'ಕಾಯಕ'ಕ್ಕೆ ಮಹತ್ವ ನೀಡಿ ಪ್ರಚುರಪಡಿಸಿದರು. ಕಾಯದ ಮೂಲಕ ಸಂಪಾದಿಸಿದ ಅನ್ನಕ್ಕೆ ಇನ್ನಿಲ್ಲದ ಗೌರವವಿದೆಯೆಂದು ತಮ್ಮ ನಡೆಯ ಮೂಲಕ ದೃಷ್ಟಾಂತವಾದರು. ಕವಿ ಕುವೆಂಪು ಅವರು ದುಡಿವ ರೈತನನ್ನು 'ನೇಗಿಲಯೋಗಿ'ಯೆಂದು ಕರೆದು ಬೌದ್ಧಿಕತೆಗಿಂತ ಕಡಿಮೆಯಲ್ಲವೆಂದು ಗುರುತಿಸಿದರು. ಸ್ವಚ್ಛತೆಯನ್ನು ಮಾಡುವ 'ಜಲಗಾರ'ನನ್ನು ಶಿವನಿಗೆ ಸಮವೆಂದು ಕರೆದು ದೈವತ್ವಕ್ಕೇರಿಸಿದರು.

ಇಂದು ವರ್ತಮಾನ ಭಾರತದಲ್ಲಿ ರೈತ, ವ್ಯಾಪಾರಿ, ಉದ್ಯಮಿ, ಕುಶಲಕರ್ಮಿ– ಮುಂತಾದ ಸರ್ಕಾರೇತರ ವಲಯದ ಜನರು ತಮ್ಮ ಪಾಡಿಗೆ ತಾವು ದುಡಿಯುತ್ತಿದ್ದಾರೆ. 'ಕಾಯಕವೇ ಕೈಲಾಸ'ವೆಂದು ಬಗೆದು ಅದರಲ್ಲಿ ಇಹಪರಗಳ ಸುಖವನ್ನು ಅರಸುತ್ತಿದ್ದಾರೆ. ಆದರೆ ಇದೇ ಮನೋನೆಲೆಯಲ್ಲಿ ನಮ್ಮ ಸರ್ಕಾರೀ ವಲಯಗಳ ನೌಕರರು ದುಡಿಯುತ್ತಿದ್ದಾರೆಯೇ ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಈ ವರ್ಗದ ಪ್ರಾಮಾಣಿಕ ದುಡಿಮೆಯ ಬಗ್ಗೆ ಅನುಮಾನವಿದ್ದುದರಿಂದಲೇ ಐವತ್ತರ ದಶಕದಲ್ಲಿ ದಿವಂಗತ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ನಿರ್ಮಾಣ ಮಾಡಿದಾಗ 'ಸರ್ಕಾರಿ ಕೆಲಸ ದೇವರ ಕೆಲಸ' ಎಂದು ಅದರ ಹೆಬ್ಬಾಗಿಲ ಮೇಲೆ ಕೆತ್ತಿಸಿದರು. ಇದರರ್ಥ ಸಾರ್ವಜನಿಕ ಕೆಲಸ ಮಾಡುವವರು, ಅದನ್ನು ಅತ್ಯಂತ ಶ್ರದ್ಧೆ, ದಕ್ಷತೆಯಿಂದ ಮಾಡಬೇಕು; ಅದರಲ್ಲಿ ಪ್ರಾಮಾಣಿಕತೆ ಇರಬೇಕು ಎಂಬುದೇ ಆಗಿತ್ತು.

ಸಾರ್ವಜನಿಕ ಕಚೇರಿಯಲ್ಲಿ ಕೆಲಸ ಮಾಡುವ ನೌಕರರು ಜನತೆಯ ತೆರಿಗೆಯ ಹಣದಿಂದ ಜೀವನ ಮಾಡುತ್ತಾರೆ. ಅವರ ಪತ್ನಿ ಮಕ್ಕಳು ಬದುಕಿನಲ್ಲಿ ನೆಲೆ ಕಾಣಲು ಸಾಧ್ಯಗುತ್ತದೆ. ಒಂದರ್ಥದಲ್ಲಿ ಜನತೆಯೇ ಅವರ ಯಜಮಾನರು. ಪ್ರಜಾಪ್ರಭುತ್ವದ ನಿಜವಾದ ಅರ್ಥವೇ ಅದು. ಆದರೆ ಆಗುತ್ತಿರುವುದೇ ಬೇರೆ. ಸಮಯಪ್ರಜ್ಞೆಯ ಅಪಾರ ಕೊರತೆ, ಅದಕ್ಷತೆ, ಅಪ್ರಾಮಾಣಿಕತೆ ಮತ್ತು ಲಂಚಗುಳಿತನ– ಇಂದು ನಮ್ಮ ಸಾರ್ವಜನಿಕ ವಲಯದಲ್ಲಿ ತಾಂಡವವಾಡುತ್ತಿವೆ. ಈ ವಲಯದಲ್ಲಿ ಕೆಲಸ ಮಾಡುತ್ತಿರುವ ನೌಕರರ ಅಂತಃಸಾಕ್ಷಿ ಕ್ಷೀಣಗೊಂಡಿದೆ.

ಇದಕ್ಕೇನು ಕಾರಣವಿರಬಹುದು? ದೇವರ ಪೂಜೆ ಅಥವಾ ಭಕ್ತಿಯ ಆಚರಣೆಯನ್ನು ಹೇಗೆ ಮಾಡಿದರೂ ಆಗುತ್ತದೆಯೆಂಬ ತಿಳಿವು, ಪರಿಕಲ್ಪನೆ ನಮ್ಮಲ್ಲಿ ಮನೆ ಮಾಡಿರುವುದು ಇದರ ಮೂಲದಲ್ಲಿಯೇ? ದೇವರ ಪೂಜೆಯನ್ನು ಅದ್ಧೂರಿಯಾಗಿ ವಿಜೃಂಭಣೆಯಿಂದಲೂ ಮಾಡಬಹುದು ಅಥವಾ ತುಳಸಿ ಎಲೆ ಅರ್ಪಿಸಿಯೂ ಮಾಡಬಹುದು. ಅಲ್ಲವೆ? ಅದರಂತೆ ಸರ್ಕಾರದ ಕೆಲಸವನ್ನು ಶ್ರದ್ಧೆಯಿಂದ ಶ್ರಮವಹಿಸಿ ಮಾಡಿದರೂ ಆಗುತ್ತದೆ ಅಥವಾ ಕಛೇರಿಗೆ ಹಾಜರಾಗಿ ಹಾಜರಾತಿಗೆ ಸಹಿ ಮಾಡಿ ಸುಮ್ಮನಿದ್ದರೂ ತೀರುತ್ತದೆ. ಎಂಬ ಅಭಿಪ್ರಾಯ ಒಡಮೂಡಿದೆಯೇ? ಅಥವಾ ಇದೆಲ್ಲವನ್ನೂ ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಸಮುದಾಯ ಹಿತವನ್ನು ಮರೆತಿರುವ ಇಂಥವರಿಗೆ ದಂಡನೆ ಇಲ್ಲದಿರುವುದೇ ಆಗಿದೆಯೇ?

■ ಶಿಕಾಕು

# ಮಾತೇ ಮುತ್ತು

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹುಯ್ಯುವರೆ– ಕೊಡಬೇಡ, ಕೊಡದೆ ಇರಬೇಡ, ಧರ್ಮವನು ಬಿಡಬೇಡ.

–ಸರ್ವಜ್ಞ

ಯಾವ ಒಂದು ದಾರಿಯೂ ಎಲ್ಲರಿಗೂ ಹಿಡಿಸುವುದಿಲ್ಲ.

–ಸ್ವಾಮಿ ವಿವೇಕಾನಂದ

ತನಗೆ ತೋರಿದ್ದೇ ಸರಿಯಾದ ದಾರಿ ಇರಬಹುದು. ಆದರೆ ಅದು ತನ್ನ ಹೊರತು ಇನ್ನೂ ಹತ್ತು ಜನಕ್ಕೆ ಸರಿಯಾಗಿ ಕಂಡಿರಬೇಕು.

–ವಿ.ಎಂ.ಇನಾಂದಾರ್

ದೇವರನ್ನು ಒಲಿಸಿಕೊಂಡು ನಮ್ಮ ಇಷ್ಟಾರ್ಥಗಳನ್ನು ಸಾಧಿಸಬೇಕಾದರೆ ನಾವು ಅವನ ಮಟ್ಟಕ್ಕೆ ಏರಬೇಕು. ಇಲ್ಲವೇ ಅವನನ್ನು ನಮ್ಮ ಮಟ್ಟಕ್ಕೆ ಇಳಿಸಿಕೊಳ್ಳಬೇಕು.

–ಎ.ಎನ್.ಮೂರ್ತಿರಾವ್

ದುಃಖ ಯಾರಿಗೂ ತಪ್ಪಿದ್ದಲ್ಲ. ಆದರೆ ದುಃಖಕ್ಕೆ ಮನತೆತ್ತು ಜೀವಿತವನ್ನು ಹಾಳುಮಾಡಿಕೊಳ್ಳುವುದು ಯೋಗ್ಯವಲ್ಲ.

–ಅನಕೃ

ನಿನ್ನ ನೀ ತಿಳಿದರೆ ನೀನೇ ದೇವರು, ನಿನ್ನ ಬಿಟ್ಟು ಬೇರೆ ದೇವರಿಲ್ಲೊ.

–ಮೋಟನಹಳ್ಳಿ ಹಸನ್ ಸಾಹೇಬ

ನಾವು ಯಾವ ಹೆಸರಿನಿಂದ ಕರೆದರೂ ಅದನ್ನು ಸ್ವೀಕರಿಸುವ ದೇವರು ಒಬ್ಬನೇ ಎಂದರಿತವನಿಗೆ ಮಾತ್ರ ದೇವರ ಮರ್ಮ ತಿಳಿದಿರುತ್ತದೆ.

–ಗುರುಗ್ರಂಥ ಸಾಹಿಬ್

ನಾಟಕ ಯಾಕಾದರೂ ಬೇಗ ಮುಗಿತ್ಯೆತೋ? ಮನಿಗೋದ್ರ ಕಷ್ಟಗಳ ಸರಮಾಲೆ. ಅಭಿನಯಿಸಕೊಂತ ಇಲ್ಲೇ ಇರೂದರಾಗ ಎಷ್ಟು ಆನಂದ ಐತಿ...

–ಸುಭದ್ರಮ್ಮ ಮನ್ಸೂರು

ದೇಶವನ್ನು ಕಟ್ಟುವ ಕೆಲಸದಲ್ಲಿ ಯಾರೂ ದೊಡ್ಡವರಲ್ಲ; ಯಾರೂ ಸಣ್ಣವರಲ್ಲ... ನಮ್ಮ ದೇಶ ದೊಡ್ಡದು ಎಂಬುದಷ್ಟೇ ತೃಪ್ತಿ ಕೊಡಬಾರದು, ಅದೊಂದು ಸುಖೀ ದೇಶ ಎನ್ನಿಸುವಂತಾಗಬೇಕು.

–ಹಾ.ಮಾ.ನಾಯಕ

ದೇವರು ಧನ, ಅಧಿಕಾರ ಕೊಡೋದು ಹತ್ತು ಜನಕ್ಕೆ ಉಪಕಾರ ಮಾಡಲಿ ಅಂತ. ಆದರೆ ಮನುಷ್ಯ ಅದನ್ನು ನೂರಾರು ಜನರನ್ನು ಸುಲಿಗೆ ಮಾಡಲು ಉಪಯೋಗಿಸುತ್ತಾನೆ.

–ತರಾಸು

ಎರಡು ಧರ್ಮಗಳ ನಡುವೆ ಜಗಳವಿರಬಾರದು. ಎಲ್ಲ ಧರ್ಮಗಳ ಜಗಳವೂ ಅಧರ್ಮದೊಂದಿಗೆ ಇರಲಿ.

–ವಿನೋಬಾ ಭಾವೆ

ಸಹೋದರರಂತೆ ಬಾಳಿರಿ, ಅಪರಿಚಿತರಂತೆ ವ್ಯವಹರಿಸಿರಿ.

–ಅರಬ್ ಗಾದೆ